ಮೈಸೂರ ಗೆಜಿಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ॥ 3, ಸ್ಯ 1887.

ಗಿಟ್ಟಿ ಈ ಭಾಗವನ್ನು ಪ್ರತ್ಯೇಕ ಕೆರಿಸಿ ಇಡುವ ಬ್ಯಾಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಜೇಫ್ ಜಡ್ಜ್‌ರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ದೇಶದ ರೆಸಿಡೆಂಟರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ನಂ. 2626--2357. ತಾರೀಖು 17ನೇ ಆಗಸ್ಟು 1887.

ಮೈಸೂರು ದೇಶದ ಆಫಿಷಿಯೇಟಿಂಗ್ ರೆಸಿಡೆಂಟರವರು ಅಪ್ಪಣೇ ಕೊಡುವದೇನಂದರೆ, ಇದರಡೀ ಕಂಡ ನಿಬಂಧನೆಯು, ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿಗೆ ಮ್ಯುನಿಸಿಪೆಲ್ ಕಮ್ಮಿಷನರುಗಳನ್ನ ಚುನಾಯಿಸುವ ಬಗ್ಯೆ ಏರ್ಪಾಟಾದ 1884ನೇ ಇಸವಿ ಜನವರೀ 30ನೇ ಮತ್ತು ಂ. 24ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್ ಮಾಡಲ್ಪಟ್ಟ ನಿಬಂಧನೆಯ 7ನೇ ರೂಲಿಗೆ ಬದಲಾಗಿ ಕೆರಿಸಲ್ಪಡತಕ್ಕದ್ದು.

7. ಯರಡನೇ ರೂಲ್‌ನಲ್ಲಿ ನಮೂದಾದ ಆಯಾ ತರಗತಿಯವರ ಪ್ರತಿನಿಧಿ ಬಗ್ಯೆ ಮ್ಯುನಿಸಿಪೆಲ್ ಕಮ್ಮಿಷನರುಗಳ ವಂದು ಬಟ್ಟು ಚುನಾವಣೆಯು, ಯರಡು ವರುಷಗಳಿಗೆ ವಂದಾವರ್ತಿ ಆಯಾ ತರಗತಿಗೋಸ್ಕರ ಇದರಡೀ ಗೊತ್ತು ಮಾಡಲ್ಪಟ್ಟಿರುವ ತಾರೀಖುಗಳಲ್ಲಿ ನಡಿಸಲ್ಪಡತಕ್ಕೆದ್ದು:—

I.	ಯೂರೋಪಿಯರ್ಯ ವ ಯುರೇಜಿಯರ್ಯರು	..	1ನೇ ಆಗಸ್ಟು.
II.	ಮಹಮ್ಮದಿಯರ್ಯರು	.. ..	8ನೇ ಡಿಟೋ
III.	ಹಿಂದೂ ವ ಯಿತರರು	.. ..	15ನೇ ಡಿಟೋ

ಅಥವಾ ಸದರೀ ತಾರೀಖುಗಳು ಆದಿವಾರ ಯಾ ಮಂಜೂರಾದ ಸರ್ಕಾರದ ರಜಾ ದಿವಸಗಳಾಗುವ ಪಕ್ಷಕ್ಕೆ ಅವುಗಳ ಮಾರನೇ ದಿವಸದಲ್ಲಿ ನಡಿಸಲ್ಪಡತಕ್ಕದ್ದು. ಮ್ಯುನಿಸಿಪೆಲ್ ಕಮ್ಮಿಷನ್ನಿನ ಪ್ರೆಸಿಡೆಂಟರು ಮೇಲೆ ನಮೂದ ಮಾಡಲ್ಪಟ್ಟ ತಾರೀಖುಗಳಲ್ಲಿ, ಸಂಬಂಧಪಟ್ಟ ಆಯಾ ತರಗತಿಯ ಚುನಾವಣೇದಾರರ ವಂದು ಸಮಾಜವನ್ನು ಕೆರಿಸತಕ್ಕದ್ದು, ಮತ್ತು ಆ ಬ್ಯಾಗ್ಯಾಗಿ ಕನಿಷ್ಟ ಪಕ್ಷ ಯೇಳು ದಿವಸಗಳಿಗೆ ಮುಂಚಿತವಾಗಿ ನೋಟೀಸ್ ಕೊಡಲ್ಪಡತಕ್ಕದ್ದಲ್ಲದೇ ಅಂಥಾ ಸಮಾಜದಲ್ಲಿ ಚುನಾವಣೇ ಬಗ್ಯಾಗಿ ಇಸಂಗಳು ಸೂಚಿಸಲ್ಪಟ್ಟು ಅನುಮೋದಿಸಲ್ಪಡತಕ್ಕದ್ದು. ಇಸಂಗಳ ಸಂಖೆಯು, ಪ್ರತಿ ತರಗತಿಗೆ ಗೊತ್ತು ಮಾಡಲ್ಪಟ್ಟ ಕಮ್ಮಿಷನರುಗಳ ಸಂಖೆಗೆ ಜಾಸ್ತಿಯಾಗದಿದ್ದ ಪಕ್ಷಕ್ಕೆ ಅಂಥಾ ಇಸಂಗಳು ಕ್ರಮವಾಗಿ ಚುನಾಯಿಸಲ್ಪಟ್ಟಂತೆ ತಿಳಿಸಲ್ಪಡತಕ್ಕದ್ದು. ಪರಂತು ಇಸಂಗಳ ಸಂಖೆಯು, ಅಂಥಾ ತರಗತೀ ಜನಗಳ ತರಫಿನ ಕಮ್ಮಿಷನರುಗಳ ಸಂಖೆಗೆ ಜಾಸ್ತಿಯಾದರೆ ಚುನಾವಣೆಯು, ಅಭಿಪ್ರಾಯ ಮೂಲಕ ಗೊತ್ತು ಮಾಡಲ್ಪಡತಕ್ಕದ್ದು.

ಅಭಿಪ್ರಾಯ ಮೂಲಕವಾದ ಚುನಾವಣೆಯು, ಆ ಕಾಲದಲ್ಲಿ ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರವರಿಂದ ಗೊತ್ತು ಮಾಡಲ್ಪಡುವಂಥಾ ವಂದು ದಿವಸದಲ್ಲಿ ನಡಿಸಲ್ಪಡತಕ್ಕದ್ದು, ಪರಂತು ಹಾಂಗೆ ಗೊತ್ತುಮಾಡಲ್ಪಡುವ ದಿವಸವು ಸಮಾಜ ಕೂರಿದ ತಾರೀಖು ಮೊದಲು ಮೂರು ದಿವಸದ ತರುವಾಯಯಿರತಕ್ಕದ್ದು.

ಹುಕ್ಕುಂ ಬವೋಜೀಬ್,
ಯಲ್. ಡಬ್ಳಿಯು. ಕಿಂಗ್,
ರೆಸಿಡೆಂಟರ ಅಸಿಸ್ಟೆಂಟ್.

ಫಿನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡಿ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಸ್‌ಛೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜೂ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟೂಡ ಡಿವಾಂಡ್ ಡ್ರಾಫಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಸ್‌ಛೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಫಾರೆಸ್ಟ್ರಿ ಇಲಾಖೆ.

ಶಿವೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 9ನೇ ಆಗಸ್ಟು 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ಕಾಣಿಸಿಯಿರುವ ಡಿಪೋಗಳಿಗೆ ಕಂಟ್ರಾಕ್ಟು ಮೂಲಕ ನಾಟಾ ವಗೈರೇ ಸಾಮಾನು ಜಮಾಯಿಸುವದಕ್ಕೆ ಈ ತಾರೀಖು ಲಾಗಾಯತು ಸೆಪ್ಟಂಬರ್ ತಾರೀಖು 30ರ ವರಿಗೆ ಟೆಂಡರುಗಳು ಅಂಗೀಕರಿಸಲ್ಪಡುತ್ತದೆ.

1. ಈ ಕಂಟ್ರಾಕ್ಟು ಕಂಟ್ರಾಕ್ಟು ತಾರೀಖು ಲಾಗಾಯತು 1888ನೇ ಇಸವಿ ಮೇ ತಾರೀಖು 31ರ ವರಿಗೆ ಜಾರೀಯಲ್ಲಿ ಯಿರತಕ್ಕದ್ದು.

1.	ಶಿವಮೊಗ್ಗಾ ಡಿಪೊ ..	5.	ಚನ್ನಗಿರೀ ಡಿಪೊ ..
2.	ಆಯನೂರು ..	6.	ಲಕ್ಕುವಳ್ಳಿ ..
3.	ಶಿಕಾರಿಪುರ ..	7.	ತರೀಕೆರೇ ..
4.	ಶಿರಾಳಕೊಪ್ಪ ..	8.	ಕಣಬೂರು ..

2. ಟೆಂಡರುಗಳು ಯಿಂಥಾ "ಡಿಪೋಗಳಿಗೆ ನಾಟಾ ವಗೈರೇ ಜಮಾಯಿಸತಕ್ಕ ಬಗ್ಗೆ ಟೆಂಡರ್" ಯಂದು ಲಿಫಾಫೆಗಳ ಮೇಲೆ ಬರೆದಿರತಕ್ಕದ್ದು.

3. ಪ್ರತಿ ವಂದು ಡಿಪೋಕ್ಕೆ ಯಿಷ್ಟು ನಾಟಾ ವಗೈರೇ ಜಮಾಯಿಸಬೇಕೆಂಬ ತಪಸೀಲ್, ಮತ್ತು ಯಾವ ಜಂಗ್ಲೀಯಿಂದ ನಾಟಾ ಕತರಾಯಿಸಬೇಕೆಂಬುವದು ಮತ್ತು ಈ ವಿಷಯದಲ್ಲಿ ತಿಳಿಯಬೇಕಾದ ಇತರ ಸಂಗತಿಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟೆಂಟ್ ಕನ್ಸರ್ವೇಟರ್ ಸಾಹೇಬರವರ ಆಫೀಸಿನಲ್ಲಿ ನೋಟೀಸು ತಖ್ತೀವೇಲೆ ನೋಡಿ ತಿಳಿದುಕೊಳ್ಳತಕ್ಕದ್ದು.